# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 812(915) |
| **ಮಾನ್ಯ ಸದಸ್ಯರ ಹೆಸರು** | ಡಾ|| ಎಂ.ಜಿ.ಮುಳೆ<br>(ವಿಧಾನಸಭೆಯಿಂದ ಚುನಾಯಿತರಾದರು) |
| **ಉತ್ತರಿಸಬೇಕಾದ ದಿನಾಂಕ** | 11.03.2026 |
| **ಉತ್ತರಿಸುವ ಸಚಿವರು** | ಪಶುಸಂಗೋಪನ ಮತ್ತು ರೇಷ್ಮೆ ಇಲಾಖೆ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೀದರ್ ಜಿಲ್ಲೆಯ ಪಶು ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಮಂಜೂರಾದ ಒಟ್ಟು ವೈದ್ಯರ (Veternary Officers) ಮತ್ತು ಸಹಾಯಕ ಸಿಬ್ಬಂದಿಗಳ ಹುದ್ದೆಗಳ ಸಂಖ್ಯೆ ಎಷ್ಟು; ಇದರಲ್ಲಿ ಪ್ರಸ್ತುತ ಎಷ್ಟು ಹುದ್ದೆಗಳು ಖಾಲಿ ಇವೆ; (ತಾಲ್ಲೂಕುವಾರು ಖಾಲಿ ಹುದ್ದೆಗಳ ವಿವರ ನಿಡುವುದು);</td><td>ಬೀದರ್ ಜಿಲ್ಲೆಯಲ್ಲಿ ಪಶುವೈದ್ಯರ ಹಾಗೂ ಸಹಾಯಕ ಸಿಬ್ಬಂದಿಗಳ ಹುದ್ದೆಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.
<table>
<tr><th>ಕ್ರ. ಸಂ</th><th>ಹುದ್ದೆ</th><th>ಮಂಜೂರು</th><th>ಭರ್ತಿ</th><th>ಗುತ್ತಿಗೆ/ ಹೊರ ಗುತ್ತಿಗೆ</th><th>ಖಾಲಿ</th></tr>
<tr><td>1</td><td>ಪಶುವೈದ್ಯರು</td><td>123</td><td>113</td><td>10</td><td>-</td></tr>
<tr><td>2</td><td>ಸಹಾಯಕ ಸಿಬ್ಬಂದಿಗಳು</td><td>386</td><td>166</td><td>102</td><td>118</td></tr>
<tr><td></td><td>ಒಟ್ಟು</td><td>509</td><td>279</td><td>112</td><td>118</td></tr>
</table>
ತಾಲ್ಲೂಕುವಾರು, ಹುದ್ದೆವಾರು ಹುದ್ದೆಗಳ ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.</td></tr>
<tr><td>ಆ</td><td>ಖಾಲಿ ಇರುವ ವೈದ್ಯಕೀಯ ಹುದ್ದೆಗಳನ್ನು ಖಾಯಂ ನೇಮಕಾತಿ ಅಥವಾ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು; ಸಿಬ್ಬಂದಿ ಕೊರತೆಯಿಂದಾಗಿ ಮುಚ್ಚಲ್ಪಟ್ಟಿರುವ ಪಶು ಚಿಕಿತ್ಸಾಲಯಗಳ ಪುನಶ್ಚೇತನಕ್ಕೆ ಯೋಜನೆ ಇದೆಯೇ;</td><td>ಬೀದರ್ ಜಿಲ್ಲೆಯಲ್ಲಿ ಪಶುವೈದ್ಯರ ಹುದ್ದೆಗಳು ಖಾಲಿ ಇರುವುದಿಲ್ಲ. ಖಾಲಿ ಇರುವ ಸಿಬ್ಬಂದಿಗಳ ಹುದ್ದೆಗಳನ್ನು ಗುತ್ತಿಗೆ/ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು ಪಶುವೈದ್ಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ. ಹೀಗಾಗಿ ಯಾವುದೇ ಪಶುಚಿಕಿತ್ಸಾಲಯಗಳು ಮುಚ್ಚಿರುವುದಿಲ್ಲ.</td></tr>
<tr><td>ಇ</td><td>ದೂರದ ಗ್ರಾಮೀಣ ಪ್ರದೇಶದ ರೈತರಿಗಾಗಿ 'ಪಶು ಸಂಜೀವಿನಿ' (1962 ಸಹಾಯವಾಣಿ) ಅಡಿಯಲ್ಲಿ ಬೀದರ್ ಜಿಲ್ಲೆಗೆ ಎಷ್ಟು ಹೊಸ ಸಂಚಾರಿ ಪಶುಚಿಕಿತ್ಸಾ ವಾಹನಗಳನ್ನು ಮಂಜೂರು ಮಾಡಲಾಗಿದೆ; ಪ್ರತಿ ತಾಲ್ಲೂಕಿಗೆ ಕನಿಷ್ಠ ಎರಡು ಘಟಕಗಳನ್ನು ಒದಗಿಸುವ ಗುರಿ ಇದೆಯೇ;</td><td>ಬೀದರ್ ಜಿಲ್ಲೆಯ ಎಲ್ಲಾ 8 ತಾಲ್ಲೂಕುಗಳಿಗೆ 8 ಸಂಚಾರಿ ಪಶುಚಿಕಿತ್ಸಾ ಘಟಕ ವಾಹನಗಳನ್ನು ಒದಗಿಸಲಾಗಿರುತ್ತದೆ.<br><br>ಪ್ರತಿ ತಾಲ್ಲೂಕಿಗೆ ಎರಡು ಘಟಕಗಳನ್ನು ಒದಗಿಸುವ ಬಗ್ಗೆ ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ.</td></tr>
</table>

| | | |
|---|---|---|
| ಈ | ಜಿಲ್ಲೆಯಲ್ಲಿ ಕಾಲುಬಾಯಿ ರೋಗ (FMD) ಮತ್ತು ಚರ್ಮಗಂಟು ರೋಗ (Lumpy Skin Disease) ನಿಯಂತ್ರಿಸಲು ಕಳೆದ ಒಂದು ವರ್ಷದಲ್ಲಿ ಎಷ್ಟು ಹಂತಗಳಲ್ಲಿ ಲಸಿಕೆ ಅಭಿಯಾನ ನಡೆಸಲಾಗಿದೆ. ಈ ಲಸಿಕೆಗಳು ಎಲ್ಲಾ ಗ್ರಾಮಗಳ ಪಶುಗಳಿಗೆ ಉಚಿತವಾಗಿ ತಲುಪಿರುವುದನ್ನು ಖಚಿತಪಡಿಸಿಕೊಳ್ಳಲು ಇರುವ ಮೇಲ್ವಿಚಾರಣಾ ವ್ಯವಸ್ಥೆ ಯಾವುದು; | ಬೀದರ್ ಜಿಲ್ಲೆಯಲ್ಲಿ 2025-26 ನೇ ಸಾಲಿನಲ್ಲಿ ಎರಡು ಹಂತಗಳಲ್ಲಿ 7 ಮತ್ತು 8ನೇ ಸುತ್ತಿನ ಕಾಲುಬಾಯಿ ರೋಗದ ವಿರುದ್ಧ ಲಸಿಕಾ ಅಭಿಯಾನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದ್ದು, ಜಿಲ್ಲೆಯಲ್ಲಿ ಒಟ್ಟು 3,69,253 (ಎರಡು ಸುತ್ತುಗಳು ಸೇರಿ) ಅರ್ಹ ಜಾನುವಾರುಗಳಿಗೆ ಉಚಿತವಾಗಿ ಕಾಲುಬಾಯಿರೋಗದ ವಿರುದ್ಧ ಲಸಿಕೆ ಹಾಕಲಾಗಿರುತ್ತದೆ.<br><br>2025-26ನೇ ಸಾಲಿನಲ್ಲಿ 4ನೇ ಸುತ್ತಿನ ಚರ್ಮಗಂಟು ರೋಗ ಲಸಿಕಾ ಕಾರ್ಯಕ್ರಮ ಹಮ್ಮಿಕೊಂಡು ಬೀದರ್ ಜಿಲ್ಲೆಯಲ್ಲಿ ಜನವರಿ-2026 ಮಾಹೆಯವರೆಗೆ ಒಟ್ಟು 1,80,908 ಜಾನುವಾರುಗಳಿಗೆ ಉಚಿತವಾಗಿ ಚರ್ಮಗಂಟು ರೋಗದ ವಿರುದ್ಧ ಲಸಿಕೆಯನ್ನು ಹಾಕಲಾಗಿರುತ್ತದೆ.<br><br>ಸದರಿ ಲಸಿಕಾ ಕಾರ್ಯಕ್ರಮವು ಬೀದರ್ ಜಿಲ್ಲೆಯ ಎಲ್ಲಾ ಗ್ರಾಮಗಳ ಪಶುಗಳಿಗೆ ಉಚಿತವಾಗಿ ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್, ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ನಿರ್ವಹಣಾ ಸಮಿತಿಯನ್ನು ರಚಿಸಲಾಗಿದೆ.<br><br>ಮುಂದುವರೆದು ಜಿಲ್ಲಾ ಉಪನಿರ್ದೇಶಕರು, ತಾಲ್ಲೂಕು ಮಟ್ಟದ ಸಹಾಯಕ ನಿರ್ದೇಶಕರು ಸಹ ಮೇಲ್ವಿಚಾರಣೆ ನಡೆಸುತ್ತಾರೆ ಹಾಗೂ ಇಲಾಖೆಯಿಂದ ಪ್ರತಿ ಜಿಲ್ಲೆಗೆ ಒಬ್ಬರಂತೆ ನೋಡಲ್ ಅಧಿಕಾರಿಗಳನ್ನು ಪರಿಶೀಲನೆಗಾಗಿ ನೇಮಿಸಲಾಗಿರುತ್ತದೆ.<br><br>ಮುಂದುವರೆದು, ಪ್ರತಿ ಜಿಲ್ಲೆಗೆ ಒಬ್ಬ ಪಶುವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕರನ್ನು ಅಥವಾ ಪ್ರಾಣಿ ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ವಿಜ್ಞಾನಿಗಳನ್ನು Third Party Inspection ಮಾಡಲು ನೇಮಿಸಲಾಗಿರುತ್ತದೆ. |
| ಉ | ಬೀದರ್ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಉತ್ತೇಜಿಸಲು ಹನಿ ನೀರಾವರಿ ಮತ್ತು ಶೆಡ್ ನಿರ್ಮಾಣಕ್ಕೆ ನೀಡಲಾಗುತ್ತಿರುವ ಸಹಾಯಧನ ಎಷ್ಟು; ಜಿಲ್ಲೆಯಲ್ಲಿ ರೇಷ್ಮೆ ಗೂಡು ಮಾರಾಟ ಮಾಡಲು ಸುಸಜ್ಜಿತ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದರಿಂದ, ರೈತರಿಗೆ ನೆರೆಯ ಜಿಲ್ಲೆಗಳಿಗೆ ಹೋಗುವ ಶ್ರಮ ತಪ್ಪಿಸಲು | ಬೀದರ್ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಉತ್ತೇಜಿಸಲು ಒಂದು ಎಕರೆ ಹಿಪ್ಪುನೇರಳೆ ವಿಸ್ತೀರ್ಣದ ಹನಿ ನೀರಾವರಿ ಅಳವಡಿಕೆಗೆ 10 * 10 ಅಡಿ ಮತ್ತು 4 * 2 ಅಂತರಕ್ಕೆ ಕ್ರಮವಾಗಿ ಕನಿಷ್ಠ ರೂ.29,333 ರಿಂದ ಗರಿಷ್ಠ ರೂ.60105 ಘಟಕ ದರ ನಿಗಧಿಪಡಿಸಲಾಗಿದೆ. ಘಟಕ ದರದ ಶೇ.90ರಷ್ಟು ಸಹಾಯಧನವನ್ನು ಎಲ್ಲಾ ವರ್ಗದವರಿಗೆ ನೀಡಲಾಗುತ್ತದೆ. |

| | | |
|---|---|---|
| | ಸ್ಥಳೀಯವಾಗಿ ಯಾವ ಕ್ರಮ ಕೈಗೊಳ್ಳಲಾಗಿದೆ?" | ಎರಡು ಹೆಕ್ಟೇರ್ ವರೆಗಿನ ಹನಿ ನೀರಾವರಿ ಅಳವಡಿಕೆಗೆ ಶೇ.90ರಷ್ಟು ಹಾಗೂ 2 ಹೆಕ್ಟೇರ್ ರಿಂದ 5 ಹೆಕ್ಟೇರ್ ರವರೆಗೆ ಶೇ.45ರಷ್ಟು ಸಹಾಯಧನವನ್ನು ನೀಡಲಾಗುತ್ತದೆ.<br><br>ಕಡಿಮೆ ವೆಚ್ಚದ ಶೆಡ್ ನಿರ್ಮಾಣಕ್ಕೆ ಕನಿಷ್ಠ 225 ಚದರಡಿಯಿಂದ ಗರಿಷ್ಠ 1000 ಚದರಡಿವರೆಗೆ ಶೆಡ್ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತದೆ. ಒಂದು ಚದರಡಿಗೆ ರೂ.100/- ಮತ್ತು 120/- ರಂತೆ ಪ್ರೋರೇಟಾ ಆಧರಿಸಿ, ಅನುಕ್ರಮವಾಗಿ ಸಾಮಾನ್ಯ ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ರೇಷ್ಮೆ ಬೆಳೆಗಾರರಿಗೆ ಸಹಾಯಧನ ನೀಡಲಾಗುತ್ತದೆ.<br><br>ರೇಷ್ಮೆ ಗೂಡು ಮಾರಾಟ ಮಾಡಲು ಬೀದರ್ ಜಿಲ್ಲೆಯ ವ್ಯಾಪ್ತಿಯ ಸರಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ ಹುಮನಾಬಾದ್‌ನಲ್ಲಿ ರೇಷ್ಮೆ ಬೆಳೆಗಾರರಿಗೆ ಅವಕಾಶ ಕಲ್ಪಿಸಲಾಗಿದೆ.<br><br>ರೇಷ್ಮೆ ಬೆಳೆಗಾರರು ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಉತ್ಪಾದಿಸಿದ ದ್ವಿತಳಿ ಗೂಡಿಗೆ ದೂರದ ಜಿಲ್ಲೆಯ ರೇಷ್ಮೆ ಮಾರುಕಟ್ಟೆಗಳಾದ ರಾಮನಗರ/ಶಿಡ್ಲಘಟ್ಟ ಹಾಗೂ ರಾಜ್ಯದ ಯಾವುದೇ ಸರಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಿದ್ದಲ್ಲಿ, ಇಲಾಖೆಯಿಂದ ಪ್ರತಿ ಕೆ.ಜಿ ದ್ವಿತಳಿ ರೇಷ್ಮೆ ಗೂಡಿಗೆ ರೂ.10/-ಗಳ ಸಾಗಾಣಿಕೆ ವೆಚ್ಚ ನೀಡಲಾಗುತ್ತಿದೆ.<br><br>ಪ್ರಸ್ತುತ, ಉತ್ತರ ಕರ್ನಾಟಕ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಗೂಡು ಮಾರಾಟ ಮಾಡಲು ಅನುಕೂಲವಾಗುವಂತೆ ಕಲಬುರಗಿ ಮತ್ತು ಹಾವೇರಿಯಲ್ಲಿ ಸುಸಜ್ಜಿತ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. |

**(ಸಂಖ್ಯೆ: AHF/32/AID/2026)**

**(ಕೆ.ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವರು.

# ಅನುಬಂಧ

## ಬೀದರ್ ಜಿಲ್ಲೆಗೆ ಸಂಬಂಧಪಟ್ಟ ವಿವಿಧ ವೃಂದಗಳ ಹುದ್ದೆಗಳ ವಿವರ

| ಕ್ರ. ಸಂ | ತಾಲ್ಲೂಕು | ಪಶುವೈದ್ಯರು | | | | ಸಹಾಯಕ ಸಿಬ್ಬಂದಿಗಳು | | | | ಒಟ್ಟು | | | |
|---|---|---|---|---|---|---|---|---|---|---|---|---|---|
| | | ಮಂ | ಭ | ಗುತ್ತಿಗೆ/ ಹೊರಗುತ್ತಿಗೆ | ಖಾ | ಮಂ | ಭ | ಗುತ್ತಿಗೆ/ ಹೊರಗುತ್ತಿಗೆ | ಖಾ | ಮಂ | ಭ | ಗುತ್ತಿಗೆ/ ಹೊರಗುತ್ತಿಗೆ | ಖಾ |
| 1 | ಬೀದರ್ | 29 | 29 | 0 | 0 | 92 | 50 | 17 | 25 | 121 | 79 | 17 | 25 |
| 2 | ಬಾಲ್ಕಿ | 25 | 22 | 3 | 0 | 79 | 34 | 26 | 19 | 104 | 56 | 29 | 19 |
| 3 | ಹುಮನಾಬಾದ್ | 15 | 14 | 1 | 0 | 48 | 19 | 5 | 24 | 63 | 33 | 6 | 24 |
| 4 | ಚಿಟಗುಪ್ಪ | 12 | 11 | 1 | 0 | 36 | 12 | 5 | 19 | 48 | 23 | 6 | 19 |
| 5 | ಔರಾದ | 14 | 14 | 0 | 0 | 43 | 15 | 24 | 4 | 57 | 29 | 24 | 4 |
| 6 | ಕಮಲಾನಗರ | 8 | 5 | 3 | 0 | 24 | 10 | 14 | 0 | 32 | 15 | 17 | 0 |
| 7 | ಬಸವಕಲ್ಯಾಣ | 16 | 14 | 2 | 0 | 48 | 21 | 7 | 20 | 64 | 35 | 9 | 20 |
| 8 | ಹುಲಸೂರ | 4 | 4 | 0 | 0 | 16 | 5 | 4 | 7 | 20 | 9 | 4 | 7 |
| | **Total** | **123** | **113** | **10** | **0** | **386** | **166** | **102** | **118** | **509** | **279** | **112** | **118** |